ಆ) ಹಾಗಿದ್ದಲ್ಲಿ ಸರ್ಕಾರದ ವತಿಯಿಂದ ನಡೆಸುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರಿಗೆ ನೀಡುವ ಮಾಸಿಕ ವೇತನಕ್ಕೆ ಸರಿಸಮನಾಗಿ ಮಾಹೆಯಾನ ವೇತನ ನೀಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಖಾಸಗಿ ಸಂಸ್ಥೆಗಳು ಸರ್ಕಾರದಿಂದ ಅನುದಾನ ಪಡೆದು ನಡೆಸುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿನ ಸಿಬ್ಬಂದಿ ವರ್ಗದವರಿಗೆ ಸರ್ಕಾರಿ ತಿಂಗಳ ವೇತನ ಎಂದು ಮಂಜೂರು ಮಾಡುತ್ತಿರುವುದಿಲ್ಲ. ಚಾಲ್ತಿಯಲ್ಲಿರುವ ನಿಯಮಾವಳಿಗಳ ಮೇರೆಗೆ ಗೌರವಧನದ ರೂಪದಲ್ಲಿ ಅನುದಾನಿತ ಸಂಸ್ಥೆಗಳಿಗೆ ಅನುದಾನವನ್ನು ಕೆಳಕಂಡಂತೆ ನೀಡಲಾಗುತ್ತಿದೆ.

1. ಮೇಲ್ವಿಚಾರಕರು ತಿಂಗಳಿಗೆ 125.00 ರಂತೆ 12 ತಿಂಗಳುಗಳು
2. ಅಡಿಗೆಯವರು ತಿಂಗಳಿಗೆ 100.00 ರಂತೆ 12 ತಿಂಗಳುಗಳು
3. ಅ. ಸಹಾಯಕರು ತಿಂಗಳಿಗೆ 75.00 ರಂತೆ 12 ತಿಂಗಳುಗಳು

ಆ) ಇಂತಹ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದಿಲ್ಲ.

ಸರ್ಕಾರದ ಅನುದಾನದಿಂದ ನಡೆಯುತ್ತಿರುವ ವಿದ್ಯಾರ್ಥಿನಿಲಯದ ಸಿಬ್ಬಂದಿಗೆ ಸರಿಸಮಾನ ವೇತನ

366 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಸರ್ಕಾರದ ಅನುದಾನದಿಂದ ನಡೆಸುತ್ತಿರುವ ವಿದ್ಯಾರ್ಥಿನಿಲಯಗಳೆಷ್ಟು?

ಆ) ಅವುಗಳಲ್ಲಿ ತನ್ನದೇ ಆದ ಸ್ವಂತ ಕಟ್ಟಡವಿಲ್ಲದೇ ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳೆಷ್ಟು? ಇದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಇ) ಸರ್ಕಾರದ ಅನುದಾನ ಪಡೆಯುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿ ಒಟ್ಟು ಎಷ್ಟು ಮಂದಿ ಸಿಬ್ಬಂದಿ ವರ್ಗವಿದೆ?

ಈ) ಈ ಸಿಬ್ಬಂದಿ ವರ್ಗದವರಿಗೆ ಸರ್ಕಾರ ಕೊಡುತ್ತಿರುವ ತಿಂಗಳ ಸಂಬಳ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಸರ್ಕಾರದ ವತಿಯಿಂದ ನಡೆಯುತ್ತಿರುವ ವಿದ್ಯಾರ್ಥಿನಿಲಯಗಳ ಸಿಬ್ಬಂದಿ ವರ್ಗದವರಿಗೆಕೊಡುತ್ತಿರುವ ತಿಂಗಳ ಸಂಬಳಕ್ಕೆ ಸಮನಾಗಿ ಅನುದಾನಿತ ವಿದ್ಯಾರ್ಥಿನಿಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗಕ್ಕೂ ತಿಂಗಳ ಸಂಬಳ ಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ರಾಜ್ಯದಲ್ಲಿ ಪರಿಶಿಷ್ಟ ಜಾತಿಯವರಿಗಾಗಿ 289 ಹಾಗೂ ಪರಿಶಿಷ್ಟ ವರ್ಗದವರಿಗಾಗಿ 16 ಅನುದಾನಿತ ವಿದ್ಯಾರ್ಥಿನಿಲಯಗಳು ಇರುತ್ತವೆ.

ಆ) 183 ಪರಿಶಿಷ್ಟ ಜಾತಿ ವಿದ್ಯಾರ್ಥಿನಿಲಯಗಳಿಗೆ ಹಾಗೂ 7 ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡವಿರುವುದಿಲ್ಲ. ಅನುದಾನಿತ ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಿರುವ ಸ್ವಯಂಸೇವಾ ಸಂಸ್ಥೆಗಳು ಸ್ವಂತ ನಿವೇಶನ ಹೊಂದಿದ್ದಲ್ಲಿ ಸರ್ಕಾರವತಿಯಿಂದ ನಿಯಮಾನುಸಾರ ಕಟ್ಟಡವನ್ನು ಕಟ್ಟಲು ಅನುದಾನವನ್ನು ನೀಡಲಾಗುವುದು.

ಇ) ಖಾಸಗಿ ಸಂಸ್ಥೆಗಳಿಂದ ನಡೆಯುತ್ತಿರುವ ಆಯಾ ಅನುದಾನಿತ ವಿದ್ಯಾರ್ಥಿನಿಲಯಗಳಿಗೆ ನಿಯಮಾವಳಿಗಳನ್ವಯ ವಿದ್ಯಾರ್ಥಿಗಳ ಸಂಖ್ಯಾಬಲಕ್ಕನುಗುಣವಾಗಿ ಕೆಳಕಂಡಂತೆ ಸಿಬ್ಬಂದಿ ವರ್ಗಕ್ಕೆ ಅವಕಾಶ ಕಲ್ಪಿಸಿದೆ.

ಸಿಬ್ಬಂದಿ ವರ್ಗ	25 ಸಂಖ್ಯಾ ಬಲ	50ರಿಂದ 75ಕ್ಕೆ ಸಂ.ಬಲ	75ರಿಂದ 100ಕ್ಕೆ ಸಂ.ಬ
1) ಮೇಲ್ವಿಚಾರಕರು	1 ಹುದ್ದೆ	1 ಹುದ್ದೆ	1 ಹುದ್ದೆ
2) ಅಡಿಗೆಯವರು	1 ಹುದ್ದೆ	2 ಹುದ್ದೆ	3 ಹುದ್ದೆ
3) ಅಡಿಗೆ ಸಹಾಯಕರು	1 ಹುದ್ದೆ	1 ಹುದ್ದೆ	1 ಹುದ್ದೆ

ಈ) ಅನುದಾನಿತ ವಿದ್ಯಾರ್ಥಿನಿಲಯಗಳ ನಿಯಮಾವಳಿಗಳನ್ವಯ ಖಾಸಗಿ ಸಂಸ್ಥೆಗಳೇ ಆಯಾ ನಿಲಯದ ಸಿಬ್ಬಂದಿವರ್ಗದವರಿಗೆ ವೇತನ ನೀಡಬೇಕಾಗಿದೆ. ಸರ್ಕಾರವು ಗೌರವಧನ ರೂಪದಲ್ಲಿ ಕೆಳಕಂಡಂತೆ ಖಾಸಗಿ ಸಂಸ್ಥೆಗಳಿಗೆ ಹಣ ಮಂಜೂರು ಮಾಡುತ್ತದೆ.

ಒಬ್ಬ ಮೇಲ್ವಿಚಾರಕರಿಗೆ ತಿಂಗಳಿಗೆ ರೂ. 125 ರಂತೆ 12 ತಿಂಗಳುಗಳಿಗೆ.

ಒಬ್ಬ ಅಡಿಗೆ ಸಹಾಯಕರಿಗೆ ತಿಂಗಳಿಗೆ ರೂ. 75 ರಂತೆ 12 ತಿಂಗಳುಗಳಿಗೆ

ಒಬ್ಬ ಅಡಿಗೆಯವರಿಗೆ ತಿಂಗಳಿಗೆ ರೂ. 100 ರಂತೆ 12 ತಿಂಗಳುಗಳಿಗೆ.

ಉ) ಇಲ್ಲ.

ನಗರಸಭೆ/ಪುರಸಭೆಯ ಅಧ್ಯಕ್ಷ, ಉಪಾಧ್ಯಕ್ಷರುಗಳಿಗೆ ನೀಡುವ ಗೌರವಧನ

367 - ಶ್ರೀ ಆರ್ ಅಶೋಕ್ (ಉತ್ತರಹಳ್ಳಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರಸಭೆ ಪುರಸಭೆಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರುಗಳಿಗೆ ನೀಡುವ ಗೌರವಧನವೆಷ್ಟು? ಈ ಗೌರವಧನವನ್ನು ಹೆಚ್ಚಿಸಲು ಸರ್ಕಾರ ನಿರ್ಧರಿಸಿದೆಯೇ? ಹಾಗಿದ್ದಲ್ಲಿ ಎಂದಿನಿಂದ ಜಾರಿಪಡಿಸಲಾಗುವುದು?